# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 602(699)

ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 09-03-2026

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2025-26ನೇ ಸಾಲಿನ ಪಠ್ಯಪುಸ್ತಕ ಬೇಡಿಕೆಯಲ್ಲಿ (STS) ದೈಹಿಕ ಶಿಕ್ಷಣ ಪುಸ್ತಕಗಳ ಬೇಡಿಕೆಯನ್ನು ಪರಿಗಣಿಸದೆ ಕೈಬಿಡಲು ಕಾರಣಗಳೇನು: | 2026-27ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ 1 ರಿಂದ 10ನೇ ತರಗತಿಗಳಿಗೆ ಮೌಲ್ಯ ಶಿಕ್ಷಣ ಪಠ್ಯಪುಸ್ತಕ, ಮೌಲ್ಯ ಶಿಕ್ಷಣವು ದೈಹಿಕ ಯೋಗಕ್ಷೇಮ, ಸಾಮಾಜಿ, ಭಾವನಾತ್ಮಕ ಮತ್ತು ಮಾನಸಿಕ ಯೋಗಕ್ಷೇಮದ ವಿಷಯಗಳನ್ನು ಒಳಗೊಂಡಿರುತ್ತದೆ. ಆದ್ದರಿಂದ ದೈಹಿಕ ಯೋಗಕ್ಷೇಮವನ್ನು ಒಳಗೊಂಡಿರುವ ದೈಹಿಕ ಶಿಕ್ಷಣವು ಮೌಲ್ಯ ಶಿಕ್ಷಣದ ಭಾಗವಾಗಿದೆ.<br><br>2026-27ನೇ ಸಾಲಿನಲ್ಲಿ ದೈಹಿಕ ಶಿಕ್ಷಣ ಪಠ್ಯವಸ್ತುವನ್ನು ಮೌಲ್ಯ ಶಿಕ್ಷಣ ಪಠ್ಯಪುಸ್ತಕದೊಳಗೆ ಸೇರಿಸಲಾಗಿದೆ. ಆದ್ದರಿಂದ ದೈಹಿಕ ಶಿಕ್ಷಣದ ಪ್ರತ್ಯೇಕ ಪಠ್ಯಪುಸ್ತಕಕ್ಕೆ ಬೇಡಿಕೆ ಸಲ್ಲಿಸಲು ಅವಕಾಶ ಕಲ್ಪಿಸಿರುವುದಿಲ್ಲ. |
| (ಆ) | 1 ರಿಂದ 10ನೇ ತರಗತಿಯ ಶಾಲಾ ಮಕ್ಕಳಿಗೆ ದೈಹಿಕ ಶಿಕ್ಷಣದ ಪಠ್ಯಪುಸ್ತಕಗಳನ್ನು ಕೈಬಿಟ್ಟು ಕೇವಲ ಮೌಲ್ಯ ಶಿಕ್ಷಣ ಹಾಗೂ ಮರುಸಿಂಚನ ಪಠ್ಯಪುಸ್ತಕಗಳನ್ನು ವಿತರಿಸಲು ಕಾರಣವೇನು: | 2026-27ನೇ ಸಾಲಿನಲ್ಲಿ ದೈಹಿಕ ಶಿಕ್ಷಣ ಪಠ್ಯವಸ್ತುವನ್ನು ಮೌಲ್ಯ ಶಿಕ್ಷಣ ಪಠ್ಯಪುಸ್ತಕದೊಳಗೆ ಸೇರಿಸಲಾಗಿದೆ.<br><br>2026-27 ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ನಿರ್ದಿಷ್ಟ ಕಲಿಕಾ ಫಲಗಳನ್ನು ಸಾಧಿಸದೇ ಇರುವ 6 ರಿಂದ 10ನೇ ತರಗತಿಗೆ ಒಟ್ಟು ದಾಖಲಾತಿಯಾಗಿರುವ ವಿದ್ಯಾರ್ಥಿಗಳ ಪೈಕಿ ಶೇ.40 ರಷ್ಟು ಆಯ್ದ ವಿದ್ಯಾರ್ಥಿಗಳಿಗೆ ಮಾತ್ರ ಕಲಿಕಾ ಗುಣಮಟ್ಟವನ್ನು ಉತ್ತಮಪಡಿಸಲು ಮರುಸಿಂಚನ ಪುಸ್ತಕವನ್ನು ಉಚಿತವಾಗಿ ವಿತರಿಸಲು ಯೋಜಿಸಲಾಗಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಮರುಸಿಂಚನ ಕಾರ್ಯಕ್ರಮ ಅನ್ವಯಿಸುವುದಿಲ್ಲ. |

| | | |
|---|---|---|
| (ಇ) | ದೈಹಿಕ ಶಿಕ್ಷಣದ ಬದಲಾಗಿ ಮೌಲ್ಯ ಶಿಕ್ಷಣ ಎಂದು ಆದೇಶ ಹೊರಡಿಸಲು ಕಾರಣವೇನು: | ಆದೇಶದಲ್ಲಿ ಮೌಲ್ಯ ಶಿಕ್ಷಣ (ದೈಹಿಕ ಶಿಕ್ಷಣದ ಪಠ್ಯವಸ್ತುವೂ ಒಳಗೊಂಡಂತೆ ) ಎಂದು ತಿಳಿಸಲಾಗಿದೆ. |
| (ಈ) | ಮಾನ್ಯ ಮುಖ್ಯಮಂತ್ರಿಗಳು ಹಾಗೂ ಶಾಲಾ ಶಿಕ್ಷಣ ಸಚಿವರು ಘೋಷಿಸಿದ್ದ 1 ರಿಂದ ದ್ವಿತೀಯ ಪಿಯುಸಿ ವರೆಗಿನ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಣೆ ಯೋಜನೆಯನ್ನು ಕೈಬಿಡಲು ಕಾರಣವೇನು: | ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| (ಉ) | ಈ ಯೋಜನೆಯ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ತಿರಸ್ಕರಿಸಿರುವುದು ನಿಜವೇ? ನಿಜವಾಗಿದ್ದಲ್ಲಿ, ಕಾರಣವೇನು? | |

**ಸಂಖ್ಯೆ: ಇಪಿ 72 ಯೋಸಕ 2026**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು